ಕರ್ನಾಟಕ ವಿಧಾನ ಸಭೆ

ಗುರುವಾರ 19 ನೇ ಮಾರ್ಚಿ 1998 ರಂದು

ಸದನವು ವಿಧಾನ ಸೌಧದಲ್ಲಿ ವಿಧಾನ ಸಭಾಂಗಣದಲ್ಲಿ

ಬೆಳಿಗ್ಗೆ: 11-40 ಗಂಟೆಗೆ

ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ : ರಮೇಶ ಕುಮಾರ್) ಅವರು

ಪೀಠವನ್ನು ಅಲಂಕರಿಸಿದ್ದರು.

1. ಶಾಸನ ರಚನೆ

ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ 1998

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿ.ಬೈರೇಗೌಡ(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):- ಸನ್ಮಾನ್ಯ ಸಭಾಧ್ಯಕ್ಷರೇ, 1998ರ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, "1998ರ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಸಿ. ಬೈರೇಗೌಡ (ಮುಖ್ಯಮಂತ್ರಿಗಳ ಪರವಾಗಿ) :- ಸನ್ಮಾನ್ಯ ಅಧ್ಯಕ್ಷರೇ, 1998ರ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- * ಪ್ರಸ್ತಾವನೆಯನ್ನು ಮಂಡಿಸಲ್ಪಟ್ಟಿತು.* ಈಗ ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)- :- ಮತದಾನಕ್ಕೆ ಏನಾದರೂ ಬಂದರೆ ಖಂಡಿತವಾಗಿಯೂ ಅವರು ಸೋಲುತ್ತಾರೆ. ತಾವು ಅವಕಾಶ ಕೊಟ್ಟರೆ, ಮತದಾನ ನಡೆದು ಹೋಗಲಿ. ದಯಮಾಡಿ ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇವೆ, ಅದನ್ನು ತಡೆಹಿಡಿಯಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಅಧ್ಯಕ್ಷರೇ, ನಾವೇನೂ ಇದನ್ನು ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ನಿಂತಿದ್ದೇವೆ ಎಂಬ ಅಭಿಪ್ರಾಯ ಬೇಡ. ಕೋರಂ ಆಗುವಷ್ಟು ಜನ ಕೂಡ ಆ ಕಡೆ ಬರಲಿಲ್ಲವೆಂದರೆ, ಅವರು ಈ ಸದನವನ್ನು ಬಹಳ ಲಘುವಾಗಿ ತೆಗೆದುಕೊಂಡಿದ್ದಾರೆಂಬ ಒಂದು ಅಭಿಪ್ರಾಯ ಬರುತ್ತದೆ. ತಾವು ಅವರಿಗೆ ಪ್ರೋತ್ಸಾಹ ಕೊಡುತ್ತೀರೋ ಎಂಬ ಭಾವನೆ ಬರುತ್ತದೆ, ನಾನು ನಿಮಗೆ ಅಪಾದನೆ ಮಾಡುತ್ತಾ ಇಲ್ಲ. ಈ

---

* ಅನುಬಂಧ - I

ರೀತಿ ಅಬ್ಸೆಂಟ್ ಇರುವುದರಿಂದ, ತಮಗೂ ಕೂಡ ಅವರು ಗೌರವ ಕೊಡುತ್ತಾ ಇಲ್ಲವೆಂಬುದು ಇದರಿಂದ ಸ್ಪಷ್ಟವಾಗತ್ತದೆ. ಎಷ್ಟು ಜನ ಇದ್ದಾರೆ ತಾವು ನೋಡಿ.

- ಗೊಂದಲ -

ಶ್ರೀ ವಾಟಾಳ್ ನಾಗರಾಜ್:- ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ದಯಮಾಡಿ. ತಾವು ನೇರವಾಗಿ ಮತಕ್ಕಾದರೂ ಹಾಕಿ, ಇಲ್ಲವೇ ಸದನವನ್ನಾದರೂ ಅರ್ಧ ಗಂಟೆ ಮುಂದಕ್ಕೆಹಾಕಿ. ಇದು ನಿಜವಾಗಿಯೂ, ಸದನಕ್ಕೆ ಆಗತಕ್ಕಂಥ ಅಗೌರವ. ನಾವೇನು ತಮ್ಮ ಮೇಲೆ ಒತ್ತಾಯ ತರುತ್ತಾ ಇಲ್ಲ. ಸದನದ ಪರಿಸ್ಥಿತಿಯನ್ನು ತಾವೇ ನೋಡಿ. ಮೋಡ ಕವಿದ ವಾತಾವರಣ ನಿರ್ಮಾಣವಾಗಿದೆ. ಮುಖ್ಯಮಂತ್ರಿ ಇಲ್ಲ, ಉಪ ಮುಖ್ಯಮಂತ್ರಿಗಳು ಇಲ್ಲ. ನಿನ್ನೆತಾನೇ ಅಯವ್ಯಯ ಮಂಡಿಸಿದಂಥ ಉಪ ಮುಖ್ಯಮಂತ್ರಿಗಳಾದರೂ ಸದನಕ್ಕೆ ಬರಬೇಕಾಗಿತ್ತು. ಅವರೂ ಇಲ್ಲ ಮಂತ್ರಿಗಳೂ ಇಲ್ಲ, ಸದಸ್ಯರೂ ಇಲ್ಲ. ಆಳುವ ಪಕ್ಷದವರು ಎಲ್ಲಿ ಹೋಗಿದ್ದಾರೆ. ಈಗಾಗಲೇ 11-30 ಗಂಟೆಯಾಗಿದೆ, ಅವರು ಎಲ್ಲಿಹೋಗಿದ್ದಾರೆ ಅವರಿಗೆ ಏನಾಗಿದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಅಧ್ಯಕ್ಷರೇ, ತಾವು ಹಲವಾರು ಅವರಿಗೆ ಸಾರಿ ಅವರಿಗೆ ಹೇಳಿದ್ದೀರಿ. ಹೇಳಿ ಹೇಳಿ ಸಾಕಾಗಿದೆ. ಅದರಿಂದ ಮತ್ತೆ ಹೇಳತಕ್ಕುಂಥ ಅವಶ್ಯಕತೆ ಇಲ್ಲಿ. ದಯವಿಟ್ಟು ಮತಕ್ಕೆ ಹಾಕಿಬಿಡಿ. ಅವರನ್ನು ಗೋಗರೆದು ಕೇಳಿಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ನೀವೇ ಹಲವಾರು ಸಲ ಎಚ್ಚರಿಕೆಯನ್ನೂ ಕೊಟ್ಟಿದ್ದೀರಿ, ಅದರೂ ಇವತ್ತು ಬಂದಿಲ್ಲ. ಅದ್ದರಿಂದ ನೀವು ಈ ಸದನವನ್ನಾದರೂ ಮುಂದಕ್ಕೆ ಹಾಕಿ.

ಶ್ರೀ ವಾಟಾಳ್ ನಾಗರಾಜ್:- ಯಾವುದೇ ಮಂತ್ರಿಗಳು ಬರುವುದಿಲ್ಲವೆಂದು ತಮಗೆ ಏನಾದರೂ ಹೇಳಿದ್ದಾರೆಯೇ ?

ಶ್ರೀ ಡಿ.ವಿ. ಸದಾನಂದಗೌಡ :- ಇಂದು: ಕೇಂದ್ರಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬರುತ್ತಿರುವುದರಿಂದ, ಇಲ್ಲಿ, ಇವರು ಭಯಭೀತರಾಗಿದ್ದಾರೆ. ಆದರಿಂದ ಸದನಕ್ಕೂ ಗೈರು ಹಾಜರಾಗಿದ್ದಾರೆ. ನಮ್ಮ ಸರ್ಕಾರ ಬಂದತಕ್ಷಣ ಇವರು ಭಯಭೀತರಾಗಿ, ನಾವು ಏಕಾದರೂ ಸದನಗೊಳಕ್ಕೆ ಹೋಗಬೇಕು ಎಂಬ ವಾತಾವರಣ ಅವರಿಗೆ ಬಂದಿದೆ.

ಶ್ರೀ ಬಿ.ಎ. ಮೊಹಿದ್ದೀನ್:- ಮಾನ್ಯ ಖಿರ್ಗೆಯವರು ಈ ಕಡೆ ಇದ್ದಾರೆ ಏನಾಗುತ್ತಿತ್ತು ಎಂಬುದು ಗೊತ್ತಿದೆ, ಅದಕ್ಕಾಗಿ ಅವರು ಸುಮ್ಮನೆ ಇದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಅವರೂ ಕೂಡ ಮತಕ್ಕೆ ಹಾಕಿ ಎಂದು ಹೇಳಿದರು.

- ಗೊಂದಲ -

ಶ್ರೀ ಡಿ.ವಿ.ಸದಾನಂದಗೌಡ:- ಪೋಲೀಸ್ ಕಾಯಿದೆಯನ್ನು ಮಂಡಿಸುವವರು ಗೃಹ ಮಂತ್ರಿಗಳಲ್ಲ. ಬೇರೆ ಯಾರೋ ಒಬ್ಬರು ಮಂಡಿಸುತ್ತಾರೆ. ಅದಕ್ಕೆ ಮತಕ್ಕೆ ಹಾಕಬೇಕೆಂದರೂ ಯಾರೂ ಹಾಕಬೇಕಾಗಿಲ್ಲ.

ಶ್ರೀ ಸಿ.ಬೈರೇಗೌಡ:- ವಿಧೇಯಕವನ್ನು ಮಂಡಿಸುವಂಥ ಹಂತದಲ್ಲಿ, ಮತಕ್ಕೆ ಹಾಕುವಂಥ ಪ್ರಸಂಗ ಈ ಸದನದಲ್ಲಿನಡೆದಿಲ್ಲ.

ಶ್ರೀ ವಾಟಾಳ್ ನಾಗರಾಜ್:- 8 ಜನ ಮಂತ್ರಿಗಳು ಮತ್ತು ಸದಸ್ಯರು ಸೇರಿ ಒಟ್ಟು 30 ಜನ ಇದ್ದಾರೆ. ಇದು ಎಲ್ಲಾದರೂ ಉಂಟೇ, ಇವತ್ತು ಸರ್ಕಾರ ಇದೆಯೆ? ಮೊನ್ನೆ ಈ ಸರ್ಕಾರ 135 ಮತಗಳನ್ನು ಪಡೆದಿದ್ದಾರೆ. ಈಗ ಬರೀ 30 ಇದ್ದೀರಿ. ಈ ಸರ್ಕಾರದಲ್ಲಿ ಭದ್ರತೆ ಇದೆಯೇ ಎಂಬ ಬಗ್ಗೆ ನಮಗೆ ಅನುಮಾನ ಬಂದಿದೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):- ಸರ್ಕಾರ ಬಹಳ ಸುಭದ್ರವಾಗಿದೆ. ನಮ್ಮ ಸರ್ಕಾರ ಭದ್ರವಾಗಿದೆ ಎಂದು ನೀವೇ ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಉಪ ಮುಖ್ಯಮಂತ್ರಿಗಳನ್ನು ನೇರವಾಗಿ ಕೇಳತ್ತಿದ್ದೇನೆ. ನಿಮ್ಮ ಸರ್ಕಾರ ಸರ್ಕಾರ ಭದ್ರವಾಗಿಯೆ? ನಾನು ಈ ಹೇಳುತ್ತೇನೆ, ನಿಮ್ಮ ಸರ್ಕಾರ ಭದ್ರವಾಗಿದೆ ಎಂದು ಮತ ಕೊಡುತ್ತೇನೆ. ಅದರಲ್ಲೇನೂ ಹಿಂದೆ ಮುಂದೆ ಇಲ್ಲ. ಆದರೆ, ಸದನದಲ್ಲಿ ನೀವೇ ಇಲ್ಲದಿದ್ದರೆ ಏನು ಮಾಡುವುದು?

ಶ್ರೀ ಸಿದ್ದರಾಮಯ್ಯ:- ನಾವು ಬಹಳ ಭದ್ರವಾಗಿದ್ದೇವೆ, ಸುಭದ್ರವಾಗಿದ್ದೇವೆ. ಅದರಲ್ಲಿ ಯಾವುದೇ ಶಂಕೆ ಇಟ್ಟುಕೊಳ್ಳಬೇಕಾಗಿಲ್ಲ.

- ಗೊಂದಲ -

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಇವರು ಸುಭದ್ರವಾಗಿದ್ದರೆ ಎಂಬುದನ್ನು ತಾವು ಹೇಳಬೇಕು ಸ್ವಾಮಿ. ಇದನ್ನು ನಿಮಗೆ ಬಿಟ್ಟಿದ್ದೇವೆ.

ಅಧ್ಯಕ್ಷರು:- ನಾನು ಇಲ್ಲ ಅಂತಲೂ ಹೇಳವುದಿಲ್ಲ, ಹೌದು ಎಂತಲೂ ಹೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತು 11 ಗಂಟೆಗೆ ಪ್ರಾರಂಭವಾಗಿದೆ. ಅಲ್ಲಿಗೆ ಬಹಳ ಜನ ಮಂತ್ರಿಗಳು ಹೋಗಿದ್ದಾರೆ. ಇಲ್ಲಿಗೂ ಕೂಡ ಅಗತ್ಯವಿರುವ ಮಂತ್ರಿಗಳನ್ನು ಕರೆಸುತ್ತೇವೆ. ಏಕೆಂದರೆ, ಅಲ್ಲಿ 11 ಗಂಟೆಗೆ ಶುರುವಾಗಿದ್ದು, ಪ್ರಶ್ನೋತ್ತರವಿರುವುದರಿಂದ ಅಲ್ಲಿ ಬಹಳ ಜನ ಮಂತ್ರಿಗಳು ಇದ್ದಾರೆ. ಇಲ್ಲಿಯೂ ಕೂಡ ಸಾಕಷ್ಟುಜನ ಮಂತ್ರಿಗಳು ಇದ್ದೇವೆ. ಆ ಭಾಗದಲ್ಲೂ ಸದಸ್ಯರು ಇದ್ದಾರೆ. ಇಲ್ಲಿಯೂ ಕೂಡ ಕೂಡ ಇದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ:- ನಿಮ್ಮ ಸರ್ಕಾರದಲ್ಲಿ ಸಾಕಷ್ಟು ಜನ ಮಂತ್ರಿಗಳು ಇದ್ದಾರೆ, ಆದರೆ, ಇಲ್ಲಿ ಮಾತ್ರ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ವಿಧೇಯಕವನ್ನು ಮತದಾನಕ್ಕೆ ಹಾಕಿದಾಗ ನೀವು ಯಾರೂ ಇರುವುದಿಲ್ಲವೆಂದು ಹೇಳಿದ್ದೇವೆ. ಮಂತ್ರಿಗಳೇ ಇರಬೇಕೆಂದು ಕೇಳುತ್ತಾ ಇಲ್ಲ. ವಿಧೇಯಕವನ್ನು ಮತದಾನಕ್ಕೆ ಹಾಕತಕ್ಕಂಥ ಸಂದರ್ಭದಲ್ಲಿ ಬಹುಮತ ಇಲ್ಲದೇ ಹೋದರೆ ವಿಧೇಯಕ ಬಿದ್ದುಹೋಗುತ್ತದೆ.

ಶ್ರೀ ಸಿದ್ಧರಾಮಯ್ಯ:- ವಿಧೇಯಕವನ್ನು ಮಂಡಿಸುವಾಗಲೇ ಮತದಾನಕ್ಕೆ ಹಾಕುತ್ತಾರೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹೌದು, ಅಧ್ಯಕ್ಷರು ಮತದಾನಕ್ಕೆ ಹಾಕಿದರು. ಅದಕ್ಕಾಗಿ ನಾವು ಹೇಳಿದೆವು, ಇಲ್ಲದಿದ್ದರೆ ನಾವು ಹೇಳಬೇಕಾದ ಪ್ರಶ್ನೆ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನನಗೆ ಒಂದು ಅನುಮಾನ ಬಂದಿದೆ. ದೇಶಪಾಂಡೆಯವರು ನಿಮ್ಮ ಹತ್ತಿರ ಬಂದಿದ್ದರು, ಏನಾದರೂ ಮಾತುಕತೆ ನಡೆದಿದೆಯೋ? ಏನು ನಡೆದಿದೆ; ರಾಜಕೀಯವಾಗಿ ಏನಾದರೂ ಗೊಂದಲ ಇದೆಯೇ? ಒಂದುವೇಳೆ ಗೊಂದಲ ಇದ್ದರೆ, ಅದನ್ನು ಹೇಳಿ, ತೆರೆ ಮರೆಯಲ್ಲಿ ಏನು ರಾಜಕೀಯ ನಡೆಯುತ್ತಾ ಇದೆ ಎಂಬುದು ಯಾರಿಗೂ ಅರ್ಥವಾಗುತ್ತಾ ಇಲ್ಲ.

- ಗೊಂದಲ -

ಶ್ರೀ ಸಿ. ಬೈರೇಗೌಡ:- ತೆರೆಯಲ್ಲೂ ಇಲ್ಲ, ಮರೆಯಲ್ಲೂ ಇಲ್ಲ. ನಮ್ಮ ಸರ್ಕಾರ ಭದ್ರವಾಗಿದೆ., ಮಾನ್ಯ ವಾಟಾಳರೂ ಕೂಡ ನಮ್ಮ ಸರ್ಕಾರ ಇರಬೇಕೆಂದು ಕಾಳಜಿವಹಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಹೌದು, ಅದು ನಿಜ. ಅದರ ಬಗ್ಗೆ ಬೇರೆ ಅಭಿಪ್ರಾಯ ಇಲ್ಲ. ನಾನು ಹೇಳುವುದು, ವಿಸರ್ಜನೆಗೂ ತಯಾರಿಲ್ಲ, ನಿಮ್ಮ ಸರ್ಕಾರ ಹೋಗಬೇಕೆಂದು ಹೇಳತಕ್ಕಂಥವನೂ ಅಲ್ಲ. ಅದರೆ, ನೀವೇ ಹೋಗತ್ತಿದ್ದೀರಿ.

ಶ್ರೀ ಸಿ.ಬೈರೇಗೌಡ:- ಆ ಅನುಮಾನ ತಮಗೆ ಬೇಡ. ನೀವು, ನಮ್ಮ ಪರವಾಗಿ ಬಹಳ ಭದ್ರವಾಗಿದ್ದೀರಿ ಎಂದು ನಮಗೆ ಗೊತ್ತಿದೆ. ನೀವು ಭದ್ರವಾಗಿರುವವರೆಗೂ ನಾವು ಭದ್ರವಾಗಿರುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸರ್ಕಾರದ ಬಗ್ಗೆ ಟೀಕೆ ಮಾಡುತ್ತಿದ್ದರೂ ಕೂಡ, ಈ ಸರ್ಕಾರ ಇರಬೇಕೆಂದು ಅವರ ಪರವಾಗಿ ವಾದ ಮಾಡುತ್ತಿದ್ದಾರಲ್ಲಾ. ಏನಿದು ಅವರು ಇಬ್ಬಗೆ ನೀತಿ?

ಶ್ರೀ ವಾಟಾಳ್ ನಾಗರಾಜ್:- ಇದು ಇಬ್ಬಗೆಯ ನೀತಿ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಸರ್ಕಾರದ ವಿಧೇಯಕವನ್ನು ಮತಕ್ಕೆಹಾಕಿದಂಥ ಸಂದರ್ಭದಲ್ಲಿ ಸದಸ್ಯರು ಕಡಿಮೆ ಸಂಖ್ಯೆಯಲ್ಲಿದರೆ, ಆ ವಿಧೇಯಕ ಬಿದ್ದುಹೋಗುತ್ತದೆ. ನಾವು ಬೆಂಬಲ ಕೊಟ್ಟರೂ ಪ್ರಯೋಜನವಿಲ್ಲ. ಸರ್ಕಾರಕ್ಕೆ ಸೋಲಾಗುತ್ತದೆ ಎಂಬ ಪ್ರಶ್ನೆ ಬರುತ್ತದೆ.

- ಗೊಂದಲ -

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಸ್ಥಿರ ಸರ್ಕಾರ ಇರಬೇಕೆಂಬುದು ನಮ್ಮ ಆಸೆ, ಆದರೆ ಅವರು ಇರುವುದಿಲ್ಲ ಎಂದರೆ ನಾನೇನು ಮಾಡಲಿ?

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಸಮಸ್ಯೆ ಬಗ್ಗೆ ಚರ್ಚೆ ಆಗಬೇಕೆನ್ನುವಂಥ ಭಾವನೆ ಇವರುಗಳಿಗೆ ಇಲ್ಲ. ಇವರಿಷ್ಟು ಜನರಿಗೂ ಇನ್ನೂ ಸ್ವಲ್ಪ ದಿವಸ ಉಳಿದುಕೊಳ್ಳಬೇಕೆಂಬುದೇ ಇವರ ಮುಖ್ಯ ಗುರಿಯಾಗಿದೆ ಮತ್ತು ಅವರಿಗೆ ರಕ್ಷಣೆ ಕೊಡುವುದೊಂದೇ ಇವರ ಒನ್ ಪಾಯಿಂಟ್ ಪ್ರೋಗ್ರಾಂ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಜನರ ಸುರಕ್ಷತೆ ಮತ್ತು ಅವರ ಭದ್ರತೆಗೋಸ್ಕರ ನಾವು ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟಿದ್ದೇವೆಯೇ ಹೊರತು, ಇವರಿಗೋಸ್ಕರ ಅಲ್ಲ. ಇದು ಸ್ಪಷ್ಟವೆಂದು ಹೇಳುತ್ತೇನೆ. ಜನತಾದಳ ಸರ್ಕಾರ ಏಕೆ ಇರಬೇಕೆಂದರೆ, ಕರ್ನಾಟಕ ರಾಜ್ಯದಲ್ಲಿ ಪದೇ ಪದೇ ಚುನಾವಣೆ ಆಗಬಾರದೆಂಬುದೇ ನಮ್ಮ ಉದ್ದೇಶ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಬಿ.ಜೆ.ಪಿ.ಮತ್ತು ಲೋಕಶಕ್ತಿ ಸೇರಿಕೊಂಡು ಸರ್ಕಾರ ಮಾಡುವುದಕ್ಕೆ ನಾವು ಬಿಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಹಾಗೂ ಮಾನ್ಯ ಪುಟ್ಟಣ್ಣಯ್ಯ, ಇವರುಗಳು ಬಿಜೆಪಿ ಮತ್ತು ಲೋಕಶಕ್ತಿ ಸೇರಿಕೊಂಡು ಸರ್ಕಾರ ಮಾಡುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದ್ದಾರೆ, ಸ್ವಾಗತ. ಅದನ್ನು ಒಪ್ಪುತ್ತೇನೆ. ಆದರೆ ರಾಜ್ಯಸಭೆ ಚುನಾವಣೆಯಲ್ಲಿ ನೀವು ಯಾರಿಗೆ ಬೆಂಬಲ ನೀಡಿದ್ದೀರಿ? ಅವರು ಮಾಡಿದ್ದು? ಏನು ಯಾರಿಗೆ 36 ಮತಗಳಿಗಿಂತ ಕಡಿಮೆ ಇದ್ದವು ಅಂತಹ ಪಕ್ಷದ ಸದಸ್ಯರನ್ನು ರಾಜ್ಯಸಭೆಗೆ ಕಳುಹಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದಂಥವರು ಯಾರು? ಸರ್ಕಾರ. ಅವರಿಗೆ ಬೆಂಬಲ ಕೊಡತಕ್ಕುಂಥವರು ಯಾರು ?ವಾಟಾಳ್ ನಾಗರಾಜ್ ಮತ್ತು ಕಮ್ಯುನಿಸ್ಟ್ ಪಕ್ಷದವರು. ಹೋದ ಸಲ ಏನಾಗಿತ್ತು? ಎರಡು ವರ್ಷದಿಂದ 39 ಜನ ಸದಸ್ಯರು ಇದ್ದರೂ ಕೂಡ ಇಲ್ಲಿ ಪೈಪೋಟಿ ನಡೆಯಿತು. ಆ ಸಂದರ್ಭದಲ್ಲಿ ನಾಲ್ಕನೇ ಅಭ್ಯರ್ಥಿ ಕೂಡ ಸಾಕಷ್ಟು ಸಂಘರ್ಷ ಮಾಡಿ ಗೆದ್ದು ಬರುವಂತೆ ಆಯಿತು. ನಾಲ್ಕು ಕ್ಯಾಂಡಿಡೇಟ್ ಕೂಡ ಸೆಕ್ಯೂಲರ್ ಫೋರ್ಸ್‌ನಿಂದ ಎಲೆಕ್ಟ್ ಆಗತಕ್ಕಂಥದ್ದು ಬಂತು. ಈಗ ಏನಾಯಿತು? ಅವರ ಉಳಿವಿಗಾಗಿ ಮತ್ತು ನೀವೆಲ್ಲರೂ ಖಾಯಂ ಆಗಿ ಇನ್ನು ಎರಡು ವರ್ಷ ಉಳಿದುಕೊಳ್ಳಬೇಕೆಂಬ ಒಂದೇ ದೃಷ್ಟಿಯಿಂದ ಅವರಿಗೆ- ಬೆಂಬಲ ಕೊಡುವುದಕ್ಕೆ ಹೋಗಿ, ಬಿಜೆಪಿಯ ಪ್ರಥಮ ಬೀಜವನ್ನು ಬಿತ್ತಿದಂಥ ಮಹಾನಾಯಕರು ಯಾರು ಎಂದರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಶ್ರೀರಾಮರೆಡ್ಡಿಯವರು, ಮಾನ್ಯ ಪುಟ್ಟಣ್ಣಯನವರು ಮತ್ತು ಜನತಾದಳದ ಮುಖಂಡರು. ಇಲ್ಲಿ ಯಾರು ಬೀಜ ಬಿತ್ತಿದ್ದರು? ಇಲ್ಲಿಂದ ಗಿಡ ಎಲ್ಲಿಗೆ ಹೋಯಿತು ಎಂದು ಜನ ಕೇಳುತ್ತಾರೆ, ಅದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ. ಪ್ರಥಮ ಬಾರಿಗೆ ದೆಹಲಿಗೆ ಹೋದದ್ದು ನಿಮ್ಮೆಲ್ಲರ ಆಶೀರ್ವಾದದಿಂದ ಮತ್ತು ಅವರ ನಿಷ್ಕ್ರೀಯತೆಯಿಂದ ಎನ್ನತಕ್ಕಂಥದ್ದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದರಲ್ಲಿ ಯಾರು ಕೂಡ ಹಿಂದು-ಮುಂದು ನೋಡುವಂಥ ಪ್ರಶ್ನೆಯೆ ಇಲ್ಲ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಾದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರತಕ್ಕಂಥದ್ದರಲ್ಲಿ ಸ್ವಲ್ಪ ಸತ್ಯ ಇದೆ. ನಾವು ಬಿಜೆಪಿ ಮತ್ತು ಲೋಕಶಕ್ತಿಗೆ ಓಟು ಹಾಕಿಲ್ಲ. ಒಂದು ವೇಳೆ ಚುನಾವಣೆ ನಡೆದು, ಅವರು ಹಾಕಿ ಎಂದು ಹೇಳಿದರೂ ಕೂಡ ನಾವು ಹಾಕತ್ತಿರಲಿಲ್ಲ. ಅವರು ಬಹಳ ಒಳ್ಳೆಯ ಜನ ಎಂದು ನಾವು ನಂಬಿದ್ದೆವು. ಅವರು ನಮ್ಮ ನಂಬಿಕೆಯನ್ನು ಉಳಿಸಿಕೊಳ್ಳಲಿಲ್ಲ. ನಾವು ಏನು ಮಾಡಿಕೊಟ್ಟು? ಅವರು ಮೂರನೇ ಅಭ್ಯರ್ಥಿ ನಿಲ್ಲಿಸಿ, ಚುನಾವಣೆಗೆ ಅವಕಾಶ ಮಾಡಿಕೊಟ್ಟು ನಮಗೆ ಓಟು ಹಾಕಿ ಎಂದು ಹೇಳಿದ್ದರೆ, ನಾವು ಓಟು ಹಾಕಿದ್ದರೆ ಆಗ ನಾವು ಜನತೆಗೆ ಉತ್ತರ ಕೊಡಬೇಕಾಗಿತ್ತು. ಆದರೆ ಆ ಕೆಲಸವನ್ನು ನಾವು ಮಾಡಿಲ್ಲ. ನಮ್ಮ ನಂಬಿಕೆಯನ್ನು ಅವರು ಉಳಿಸಿ ಕೊಳ್ಳಲಿಲ್ಲ ಅಷ್ಟೆ. ಆದುದರಿಂದ ಮಾನ್ಯ ಖರ್ಗೆಯವರು ಹೇಳಿರುವುದರಲ್ಲಿ ಸತ್ಯ ಇದೆ. ಅವರೆಲ್ಲರೂ ಒಪ್ಪಂದ ಮತ್ತು ರಾಜಿಮಾಡಿಕೊಂಡು, ಒಂದು ಅಭ್ಯರ್ಥಿಯನ್ನು ಗೆಲ್ಲಿಸಿದ್ದಾರೆ, ಅದನ್ನು ಈ ರಾಜ್ಯನ್ನು ಈ ರಾಜ್ಯದ ಜನತೆ ಕ್ಷಮಿಸುವುದಿಲ್ಲ ಮತ್ತು ನಾವೂ ಅದನ್ನು ಕ್ಷಮಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈ ಬೀಜವನ್ನು ಬಿತ್ತಿದ್ದೇವೆಂದು ಮಾನ್ಯ ಖರ್ಗೆಯವರು ಹೇಳಿದರು. ಬೀಜ ಬಿತ್ತುವುದಕ್ಕೆ ಮೊದಲೇ ಹೊಂದಾಣಿಕೆ ಆದುದ್ದು

ಕೇವಲ ಜನತಾದಳ ಮತ್ತು ಬಿಜೆಪಿ ಒಂದೇ ಅಲ್ಲ, ಅದರೊಳಗೆ ಕಾಂಗ್ರೆಸ್‌ನವರು ಹೊಂದಿಕೊಂಡು, ನಮ್ಮದನ್ನು ನಾವು ಗೆದ್ದುಕೊಳ್ಳತ್ತೇವೆ, ನಿಮ್ಮದನ್ನು ನೀವು ಗೆದ್ದುಕೊಳ್ಳಿಎಂದು ಒಳಗೊಳಗೆಯೇ ಹೊಂದಾಣಿಕೆ ಆಯಿತು. ಹೋದಸಾರಿ ರಾಜ್ಯಸಭೆ ಚುನಾವಣೆ ನಡೆದಾಗ ಆ ಸಂದರ್ಭದಲ್ಲಿ ಇವರೆಲ್ಲರೂ ಕರ್ನಾಟಕದಲ್ಲಿ ಕಾವೇರಿ ನದಿ ನೀರಿನ ಬಗ್ಗೆ ಅನ್ಯಾಯವಾಗಿದೆ ಮತ್ತು ನೀರನ್ನು ಬಿಟ್ಟಿದ್ದಾರೆಂದು ನಾನು ಒಬ್ಬರಿಗೂ ಓಟು ಹಾಕಿಲಿಲ್ಲ. ತಾವು ಅದನ್ನು ಗಮನಿಸಬೇಕು. ಆದ್ದರಿಂದ ನಾವು ಎಷ್ಟರಮಟ್ಟಿಗೆ ಇದ್ದೇವೆ ಎಂಬುದನ್ನು ಮಾನ್ಯ ಖರ್ಗೆಯವರು ಅರ್ಥ ಮಾಡಿಕೊಳ್ಳಬೇಕು. ಮತ್ತು ಕಾಂಗ್ರೆಸ್‌ನವರು ಹಾಗೂ ರಾಜ್ಯವೂ ಕೂಡ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಡಿ.ಎ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ರಾಜ್ಯಸಭೆ ಚುನಾವಣೆಯಲ್ಲಿ ಓಟು ಹಾಕದೆ ಇದ್ದರೂ ಕೂಡ, ಓಟು ಹಾಕಿದಂತೆ ಆಗುತ್ತದೆಂದು, ರಾಜಕೀಯ ಗುಟ್ಟು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಚೆನ್ನಾಗಿ ಗೊತ್ತು, ಅದಕ್ಕಾಗಿ ಅವರು ಓಟು ಹಾಕಿಲಿಲ್ಲ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು, ನಾವು ಮೂರು ಜನರು ಬಿಜೆಪಿ ಬೀಜ ಬಿತ್ತುವ ವಿಷಯದಲ್ಲಿ ಕಾರಣ ಆಗಿದ್ದೀರಿ ಎಂದು ಹೇಳಿದ್ದಾರೆ. ಇವತ್ತು ಇಡೀ ರಾಷ್ಟ್ರದಲ್ಲಿ ಬಿಜೆಪಿ ಬೀಜ ಬಿತ್ತುವುದಕ್ಕೆ ಅವರೆಲ್ಲರೂ ಕಾರಣ ಆಗಿದ್ದಾರೆ. ಇವತ್ತು ಸ್ವೀರಿಂಗ್ ಇನ ಸೆರಿಮನಿ ಮಾಡುತ್ತಿದ್ದಾರೆ. ರಾಜ್ಯದ ಮತದಾರರ ಪರವಾಗಿ ಈ ಸರ್ಕಾರ ಐದು ವರ್ಷ ಇರಲಿ ಎನ್ನುವ ಉದ್ದೇಶದಿಂದ ಜನತಾಪಕ್ಷ ಸರ್ಕಾರ ರಚನೆ ಮಾಡುವುದಕ್ಕೆ ಬೆಂಬಲ ಕೊಟ್ಟಿದ್ದೇವೆ. ಇದಕ್ಕಾಗಿ ಪದೇಪದೇ ಚುನಾವಣೆಗೆ ಹೋಗುವುದು ಸರಿಯಿಲ್ಲ ಮತ್ತು ತಾವು ಅಪಾದನೆ ಮಾಡುವುದು ಸರಿಯಲ್ಲ. ಇವತ್ತು ರಾಷ್ಟ್ರದಲ್ಲಿ ಪೂರ್ಣ ಪ್ರಮಾಣದ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದಿರುವುದಕ್ಕೆ, ಬಿಜೆಪಿ ಯವರು ನ್ಯಾಷನಲ್ ಫ್ರಂಟ್ ಮತ್ತು ಕಾಂಗ್ರೆಸ್‌ನವರ ಫೋಟೋಗಳನ್ನು ಇಟ್ಟುಕೊಳ್ಳಬೇಕು. ಇಡೀ ರಾಷ್ಟ್ರಕ್ಕೆ ಇವತ್ತು ಬೀಜವನ್ನು ಅವರೇ ಬಿತ್ತು, ನಮ್ಮ ಮೇಲೆ, ಇವರೇ ಬೀಜ ಬಿತ್ತಿದ್ದರೆಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ.ಬಿ. ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಬರಿ ಬೀಜ ಬಿತ್ತಿದ್ದರೆ ಬೆಳೆ ಬೆಳೆಯುವುದಿಲ್ಲ. ಇದು ತಮಗೆ ಗೊತ್ತಿದೆ. ಬೀಜ ಬಿತ್ತಿದ ಮೇಲೆ ಅದಕ್ಕೆ ನೀರು ಹುಯ್ಯಬೇಕು. ಅವರು ಬೀಜ ಬಿತ್ತಿದರೆಂದು ಸನ್ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು, ಆ ಬೀಜ ಬಿತ್ತು,ಬೆಳೆದು ಮೊಳಕೆ ಆಗಬೇಕಾದರೆ ನೀರು ಹಾಕಬೇಕು, ಆದ್ದರಿಂದ ಅವರು ಬಿತ್ತಿದ್ದರು ಅದಕ್ಕೆ ಇವರು ನೀರು ಹಾಕಿದರು. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಇಡೀ ರಾಷ್ಟ್ರದಲ್ಲಿ ಬೀಜ ಬಿತ್ತಿದ್ದವರು ಇದ್ದಾರೆ ಮತ್ತು ನೀರು ಹಾಕಿದವರು ಇದ್ದಾರೆ. ಈಗ ಇವರಿಬ್ಬರೂ ಅಪಾದನೆ ಮಾಡುತ್ತಿದ್ದಾರೆ. ಇವರಿಬ್ಬರು ಮಾಡಿದ್ದಕ್ಕೆ ನಾವು ಬೆಳೆ ಬೆಳೆಯವುದರಲ್ಲಿ ತಪ್ಪೇನು ಇದೆ?

ಅಧ್ಯಕ್ಷರು: ಅದು ಬೆಳೆದು, ನೆರಳು, ಕಾಯಿ, ಹೂ, ಎಲ್ಲಾ ಕೊಡಲಿ ನೋಡೋಣ.

ಶ್ರೀ ಬಿ.ಬಿ. ಶಿವಪ್ಪ:- ಒಳ್ಳೆಯ ಬೆಳೆ ಬರುತ್ತದೆ. ಇದರಲ್ಲಿ ಯಾವುದೇ ಅನುಮಾನ ಇಲ್ಲ.